ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .
ಸಿಸಿ.1736/2017

| | | |
|---|---|---|
| ಸಾಕ್ಷಿದಾರರು ಹೆಸರು | : ಮಹದೇವ | ದಿನಾಂಕಃ 15.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : ಕೆಂಪಯ್ಯ | |
| ವಯಸ್ಸು | : 58 ವರ್ಷ | |
| ಉದ್ಯೋಗ | : ಆಟೋ ಡ್ರೈವರ್ | **CW-10** |
| ವಾಸಸ್ಥಳ | : ಮೈಸೂರು | **PW-9** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಈಗ ಸುಮಾರು 6-7 ವರ್ಷಗಳ ಹಿಂದೆ ಮದ್ಯಾಹ್ನ ಸುಮಾರು 2 ರಿಂದ 3 ಗಂಟೆ ಸಮಯದಲ್ಲಿ ನಾನು ನನ್ನ ಆಟೋದಲ್ಲಿ ಪ್ರಯಾಣಿಕರನ್ನು ಕರೆದುಕೊಂಡು ಮೈಸೂರಿನ ರೈಲ್ವೆಸ್ಟೇಷನ್ ಗೆ ಬಂದಿದ್ದಾಗ ರೈಲ್ವೆ ರಕ್ಷಣಾ ದಳದ ಪೋಲೀಸರು ನನ್ನನ್ನು ಕರೆದು ಒಂದು ಮಹಜರಿಗೆ ಪಂಚರಾಗುವಂತೆ ಕೇಳಿರುತ್ತಾರೆ. ಅದಕ್ಕೆ ನಾನು ಒಪ್ಪಿರುತ್ತೇನೆ. ನಂತರ ಸ್ಥಳದಲ್ಲಿ ಒಂದು ದ್ವಿಚಕ್ರವಾಹನವಿದ್ದು ಸದರಿ ದ್ವಿಚಕ್ರವಾಹನವು ರೈಲ್ವೆ ಗೇಟಿಗೆ ಡಿಕ್ಕಿ ಮಾಡಿದ್ದು ದಂಡ ಕಟ್ಟಿಸಿಕೊಂಡು ಸದರಿ ವಾಹನವನ್ನು ಬಿಡುಗಡೆ ಮಾಡುತ್ತಿದ್ದೇವೆ ಎಂಬುದಾಗಿ ಪೋಲೀಸರು ನನಗೆ ತಿಳಿಸಿದರು. ಸಾಕ್ಷಿಗೆ ನಿಪಿ 10 ಮಹಜರನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ10(ಡಿ) ಎಂದು ಗುರುತಿಸಲಾಯಿತು. ನಿಪಿ 10 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಇದನ್ನು ಹೊರತು ಪಡಿಸಿ ಬೇರೆ ಏನು ಗೊತ್ತಿಲ್ಲ. ಆರೋಪಿಯನ್ನು ಈ ಹಿಂದೆ ನೋಡಿಲ್ಲ.

( ಮಾನ್ಯ ಎಪಿಪಿರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಎಪಿಪಿರವರಿಂದಃ

ನಿಪಿ 10 ಮಹಜರನ್ನು ದಿಃ 03.06.2017 ರಂದು ಮಾಡಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ಮಹಜರ್ ಕಾಲದಲ್ಲಿ ಸ್ಥಳದಲ್ಲಿ ಕೆ ಎ 09 ಇಜಿ 1697 ಸಂಖ್ಯೆಯ ದ್ವಿಚಕ್ರ ವಾಹನ ಮತ್ತು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ಇದ್ದರು ಎಂದರೆ ನಾನು ನೋಡಲಿಲ್ಲ. ಆ ಸಂದರ್ಬದಲ್ಲಿ ಚಾಸಾ 3 ರವರು ಸಹಾ ಇದ್ದರು ಎಂದರೆ ಸರಿಯಲ್ಲ. ಅ ದಿನ ಚಾಸಾ 3 ರವರು ರೈಲ್ವೆ ರಕ್ಷಣಾ ದಳದ ಸಬ್ ಇನ್ಸ್ ಪೆಕ್ಟರ್ ರವರಿಗೆ ಆರೋಪಿ ಮತ್ತು ಈ ಮೇಲೆ ಹೇಳಿದ ದ್ವಿಚಕ್ರ ವಾಹನವನ್ನು ತೋರಿಸಿ ಆರೋಪಿ ಸದರಿ ದ್ವಿಚಕ್ರ ವಾಹನದಿಂದ ರೈಲ್ವೆ ಗೇಟ್ ಸಂಖ್ಯೆ 47 ಕ್ಕೆ ಡಿಕ್ಕಿ ಮಾಡಿ ಪರಾರಿಯಾಗಿದ್ದಾನೆ ಎಂಬುದಾಗಿ ಹೇಳಿದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ 14 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಅರೋಪಿ ಪರ ಶ್ರೀ ಸಿ ಎಸ್ ವಕೀಲರಿಂದಃ

ಪೋಲೀಸರು ನನಗೆ ಸಹಿ ಮಾಡುವಂತೆ ಹೇಳಿದ್ದು ಬೇರೆ ಯಾವುದೇ ವಿಚಾರ ಹೇಳಿಲ್ಲ ಎಂದರೆ ಸರಿ . ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿ . ಪೋಲೀಸರ ಕೋರಿಕೆ ಮೇರೆಗೆ ನಿಪಿ 10 ಕ್ಕೆ ಸಹಿ ಮಾಡಿದ್ದು ಬೇರೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿ .

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.